ವಿಚಾರವೆಲ್ಲ ಅರ್ಥವಾಗುತ್ತದೆ. ಅವರು tour ಮಾಡುವುದಕ್ಕೆ ದಯವಿಟ್ಟು Chief Minister ರವರು ಸೂಚಿಸಿದರೆ ಎಲ್ಲಾ problem sort out ಆಗುತ್ತದೆ.

ಅಧ್ಯಕ್ಷರು : ಈ ವಿಷಯದ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಗಂಗಾ ಕಲ್ಯಾಣ ಯೋಜನೆ ಕುರಿತು

10(110) ಶ್ರೀ.ಬಿದರೂರು.ಎಸ್.ವಿರೂಪಾಕ್ಷಪ್ಪ (ಗದಗ)
ಶ್ರೀ ಡಿ.ಸುಧಾಕರ್ (ಸಮಾಜ ಕಲ್ಯಾಣ ಸಚಿವರು)

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ನಿಗಮದಿಂದ ಅನುಷ್ಠಾನಗೊಳ್ಳಬೇಕಾದ ಗಂಗಾ ಕಲ್ಯಾಣ ಯೋಜನೆಗಳು 2008–09ನೇ ಸಾಲಿನಲ್ಲಿ ಹಾಗೂ ಅದಕ್ಕೂ ಹಿಂದಿನ ಸಾಲಿನಲ್ಲಿ ಅಪೂರ್ಣ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮ ಯಾವುದು?

ಗಂಗಾ ಕಲ್ಯಾಣ ಯೋಜನೆಯನ್ನು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ; ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಾಗೂ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವುಗಳು ಅನುಷ್ಠಾನಗೊಳಿಸಲಾಗುತ್ತಿದ್ದು ಈಗಾಗಲೇ ಕೊರೆಯಲಾದ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ಸ್ ಅಳವಡಿಸಿ ವಿದ್ಯುದ್ಧೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಿದರೂರು ಎಸ್. ವಿರೂಪಾಕ್ಷಪ್ಪ : ಸಚಿವರು ಒದಗಿಸಿದ ಉತ್ತರ ಪರಿಪೂರ್ಣವಾಗಿಲ್ಲವೆನ್ನುವುದು ನನ್ನ ಅನಿಸಿಕೆ. ಗಂಗಾ ಕಲ್ಯಾಣ ಯೋಜನೆಗಳು ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಗಮನಕ್ಕೆ ಬಂದಿದೆ ಎಂದು ಒಪ್ಪಿಕೊಂಡಿದ್ದಾರೆ. 2009–10ನೇ ಸಾಲಿನಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುವ ಗುತ್ತಿಗೆದಾರ ಇಲ್ಲಿಯವರೆಗೆ ಬೋರ್‌ವೆಲ್‌ಗಳನ್ನು ಕೊರೆದಿಲ್ಲ. ಈಗಾಗಲೇ 2008–09ರ ಸಾಲಿನದು ಕೂಡ ಅಪೂರ್ಣಗೊಂಡಿದೆ. ಪೂರ್ಣಗೊಳಿಸುವುದಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ಕೇಳಿದ್ದಕ್ಕೆ, ಕೊರೆದ ಬಾವಿಗಳಿಗೆ ವಿದ್ಯುತ್ ಅನ್ನು ಒದಗಿಸಿ ಪೂರ್ಣಗೊಳಿಸುತ್ತೇವೆಂದು ಹೇಳಿದ್ದಾರೆ. ಆದರೆ, ಅಲ್ಲಿ ಇನ್ನೂ ಬಾವಿಯನ್ನೇ ಕೊರೆದಿಲ್ಲ. ಆದ್ದರಿಂದ, ಈ ಎತ್ತರ ಅಪೂರ್ಣವಾಗುತ್ತದೆಂಬುದು ನನ್ನ ಅನಿಸಿಕೆಯಾಗಿದೆ. ಈ ಬಗ್ಗೆ ವಿವರವಾದ ಉತ್ತರ ನೀಡಬೇಕೆಂದು ನಾನು ಕೋರುತ್ತೇನೆ.

ಶ್ರೀ ಡಿ. ಸುಧಾಕರ : 2007–08ರ ಸಾಲಿನಲ್ಲಿ ಸುಮಾರು 1300 ಬೋರ್‌ವೆಲ್‌ಗಳನ್ನು ಕೊರೆಯುವುದು ಬಾಕಿ ಇದೆ. 2008–09ರ ಸಾಲಿನಲ್ಲಿ ಇಗಾಗಲೇ ನಾವು ಇರುವ ಗುರಿಗೆ ಶೇ.95ರಷ್ಟು ಅಂದರೆ 11760 ಬೋರ್‌ವೆಲ್‌ಗಳನ್ನು ಕೊರೆದಿದ್ದೇವೆ. ಮೋಟಾರುಗಳನ್ನು ಅಳವಡಿಸುವುದಕ್ಕೆ ಟೆಂಡರ್ ಪ್ರಕ್ರಿಯೆ ನಡೆದಿದ್ದು. ಅದಕ್ಕೆ ಯಾರೂ ಮುಂದೆ ಬರದಿದ್ದುದರಿಂದ ಮತ್ತೊಂದು ಸಾರಿ ಟೆಂಡರ್ ಕರೆಯುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಇನ್ನು 15–20 ದಿವಸಗಳಲ್ಲಿ ಆ ಪೂರ್ಣ ಪ್ರಕ್ರಿಯೆಯನ್ನು ನಾವು ಮುಗಿಸಲು ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ತಮಗೆ ಹೇಳಲಿಚ್ಚಿಸಪಡುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : 2008–09ರದ್ದು ಇರಲಿ. 2007–08ನೇ ಸಾಲಿನಲ್ಲಿ 1300 ಬೋರ್‌ವೆಲ್‌ಗಳನ್ನು ಕೊರೆಸುವುದು ಬಾಕಿ ಇದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. 2008–09ರ ಸಾಲಿನದು ಇನ್ನೂ ರಾಜ್ಯಾದ್ಯಂತ ಪ್ರಾರಂಭವೇ ಆಗಿಲ್ಲ. ಅದರಲ್ಲಿಯೂ ಕೂಡ ಮಲೆನಾಡಿನಲ್ಲಿ, ಕರಾವಳಿ ಪ್ರದೇಶದಲ್ಲಿ ಮತ್ತು ಹಾಸನ, ಶಿವಮೊಗ್ಗ ಈ ಜಿಲ್ಲೆಗಳಲ್ಲಿ ಇನ್ನೂ ಆ ಪ್ರಕ್ರಿಯೆಯೇ ಪ್ರಾರಂಭವಾಗಿಲ್ಲ. Tender system ಅನ್ನು State Level ನಲ್ಲಿ ಇಟ್ಟಿದ್ದೀರಿ. ಕೇವಲ ಟೆಂಡರ್ ಅನ್ನು ಅಂತಿಮಗೊಳಿಸುವುದಕ್ಕೆ ವರ್ಷಗಟ್ಟಲೆ ಸಮಯ ತೆಗೆದುಕೊಳ್ಳುವುದಾದರೆ, ನೀವು ಬೋರ್‌ವೆಲ್ ಯಾವಾಗ ಕೊರೆಸುತ್ತೀರಿ? ಈಗ ಡಿ.ಸಿ.ಯವರ ಮಟ್ಟಕ್ಕೆ ಇಳಿಸಿದ್ದೇವೆಂದು ಹೇಳಿದ್ದೀರಿ, ಇದೂ ಕೂಡ ಜಾರಿಗೆ ಬಂದಿಲ್ಲ. ನೀವು ಜಿಲ್ಲಾ ಮಟ್ಟದಲ್ಲಿ ಕರೆಯಿರಿ. ಪರಿಶಿಷ್ಟ ಜಾತಿ:ವರ್ಗದವರ ಕಾರ್ಯಕ್ರಮಗಳನ್ನು ಈ ರೀತಿ decentralize ಮಾಡದೇ ಇದ್ದರೆ, ಆ ಕಾರ್ಯಕ್ರಮಗಳು ಹೇಗೆ ಜಾರಿಯಾಗುವುದಕ್ಕೆ ಸಾಧ್ಯ? ಆ ನಿಟ್ಟಿನಲ್ಲಿ ಏನು ಕ್ರಮ ಕೈಗೊಂಡಿದ್ದೀರಿ? ಅಂಕಿಅಂಶವಾರು 2007–08, 2008–09ರ ಅಂಕಿಅಂಶ ನನಗೆ ಬೇಕು. ಮಲೆನಾಡು ಪ್ರದೇಶದಲ್ಲಿ ಇದಿನ್ನೂ ಪ್ರಾರಂಭವೇ ಆಗಿಲ್ಲ. ಇದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎನ್ನುವ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಯು.ಟಿ. ಖಾದರ್ : ನಮ್ಮಲ್ಲಿ ಕಳೆದ ಆರ್ಥಿಕ ವರ್ಷದ ಬೋರ್‌ವೆಲ್ sanction ಆದದ್ದನ್ನು ಯಾರೋ ಹುಬ್ಬಳ್ಳಿಯವರಿಗೋ ಅಥವಾ ಇನ್ಯಾರಿಗೋ ಟೆಂಡರ್ ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಗಂಗಾ ಕಲ್ಯಾಣ ಯೋಜನೆಯಲ್ಲಿ, ನಮ್ಮ ತಾಲ್ಲೂಕು, ಜಿಲ್ಲೆಯಲ್ಲಿ ಒಂದು ಬೋರ್‌ವೆಲ್ ಮಾತ್ರ ಮಂಜೂರಾಗಿದ್ದು ಅದೂ ಸಹ ಇನ್ನೂ ಆಗಲಿಲ್ಲ. ಈಗ ಕೇಳಿದರೆ, ಅದು ಈ ವರ್ಷ ರದ್ದಾಗಿದೆ ಎಂದು ಹೇಳುತ್ತಿದ್ದಾರೆ. ಇದಕ್ಕೆ ಯಾವ ಫಲಾನುಭವಿ ಸಹ ಕಾರಣವಲ್ಲ. ಈ ವ್ಯವಸ್ಥೆಯ ದೋಷದಿಂದ ಅದು ರದ್ದಾಗಿರಬಹುದೇ ವಿನಃ ಬೇರೆ ಯಾವ ಕಾರಣದಿಂದಲೂ ಅಲ್ಲ. ಆದ್ದರಿಂದ, ಕಳೆದ ವರ್ಷ ಕೊಟ್ಟಿರುವುದು ಏನಿದೆ, ಅದನ್ನು ಈ ವರ್ಷದಲ್ಲಾದರೂ ಕೊಡಬೇಕಾಗುತ್ತದೆ. ಜೊತೆಗೆ, ಬೋರ್‌ವೆಲ್ ಕೊರೆಯುವ ವ್ಯವಸ್ಥೆಗೆ ರಾಜ್ಯಮಟ್ಟದಲ್ಲಿ ಟೆಂಡರ್ ಕರೆಯುವುದರಿಂದ, ಜಿಲ್ಲಾಮಟ್ಟದಲ್ಲಿ ಈಗಾಗಲೇ

ಜಿಲ್ಲಾಪಂಚಾಯತ್ Engineering Sub Division ನಿಂದ ಸಾಕಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗುತ್ತಿದೆ. ಅದೇ ರೀತಿಯಲ್ಲಿ ಇದನ್ನು ಏಕೆ ಮಾಡುವುದಕ್ಕಾಗುವುದಿಲ್ಲವೆನ್ನುವುದು ನನ್ನ ಪ್ರಶ್ನೆಯಾಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : 'No Water No Money Scheme' ನಲ್ಲಿ ಬೋರ್‌ವೆಲ್ ಕೊರೆಯಲಿಕ್ಕೆ ಹೋಗಿ ಈ ಯೋಜನೆ fail ಆಗುತ್ತಿದೆ. ದಯವಿಟ್ಟು, ಅದನ್ನು ಬದಲಾಯಿಸಿ. ಇದನ್ನು ಮಾಡುವುದಕ್ಕೆ ಸರ್ಕಾರಕ್ಕೇನೂ ತೊಂದರೆ ಇಲ್ಲ. ಪರಿಶಿಷ್ಟ ಜಾತಿ:ಪಂಗಡ, ಹಿಂದುಳಿದವರಿಗೋಸ್ಕರ ಹಮ್ಮಿಕೊಂಡಿರುವ ಕಾರ್ಯಕ್ರಮ ಇದಾಗಿದೆ. ದಯಮಾಡಿ, ಅದನ್ನು ತೆಗೆದು ಹಾಕಿ. ಬೋರ್‌ವೆಲ್ ಕೊರೆದು ನೀರು ಬಂದರೆ ಹಣ ಕೊಡಿ. ನೀವು ಆ scheme ತೆಗೆಯದೇ ಹೋದರೆ ಈ scheme ಉದ್ಧಾರವಾಗುವುದಿಲ್ಲ. ಆಗಿರುವಂಥವುಗಳಿಗೆ ಇನ್ನೂ ವಿದ್ಯುದ್ದೀಕರಣವಾಗಿಲ್ಲ. ಕಳೆದ ಮೂರೂನಾಲ್ಕು ವರ್ಷಗಳಿಂದ ಬಾಕಿ ಇದೆ. ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ಈ ವಿಷಯ ತರುವುದಕ್ಕೆ ಬಯಸುತ್ತೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಹೋದ ತಿಂಗಳು ಕೆಡಿಪಿ ಮೀಟಿಂಗ್‌ನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಮೀಟಿಂಗ್ ಮಾಡಿದಾಗ ಎಸ್‌ಸಿ-ಎಸ್‌ಟಿಯವರಿಗೆ ಎಷ್ಟು ಬೋರ್‌ಗಳನ್ನು ಕೊರೆದಿದ್ದೀರಿ? ಇವುಗಳಿಗೆ ಯಾವಾಗ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುತ್ತೀರಿ? ಎಂದು ಕೇಳಿದಾಗ ಒಂದು ತಿಂಗಳೊಳಗಾಗಿ ಸಂಪರ್ಕ ಕೊಡುತ್ತೇವೆಂದು ಅಧಿಕಾರಿಗಳು ಉತ್ತರಿಸಿದರು. ಇವತ್ತು ಇಲ್ಲಿ ಸಚಿವರು ಟೆಂಡರ್ ಯಾರು ಹಾಕಿಲ್ಲ ಹೀಗಾಗಿ ಮರು ಟೆಂಡರ್ ಮಾಡುತ್ತೇವೆಂದು ಹೇಳುತ್ತಾರೆ. ಇದರಲ್ಲಿ ಯಾವುದು ಸತ್ಯಾಂಶವಿದೆ ಎಂದು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಡಿ. ಸುಧಾಕರ್ : ಈಗಾಗಲೇ 08-09 ನೇ ಸಾಲಿನಲ್ಲಿ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದರು. 08-09 ನೇ ಸಾಲಿನಲ್ಲಿ ಅತಿ ಹೆಚ್ಚು ಬೋರ್‌ವೆಲ್‌ಗಳನ್ನು ಅಂದರೆ 13,500 ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕ ಕೊಡಲಾಗಿದೆ ಎಂದು ಹೇಳಬಯಸುತ್ತೇನೆ. 07-08 ನೇ ಸಾಲಿನಲ್ಲಿ 5,500 ಬೋರ್‌ವೆಲ್‌ಗಳಿಗೆ ಕೊಟ್ಟಿದ್ದರೆ ಈ ವರ್ಷ ಅತಿ ಹೆಚ್ಚು ಸಂಪರ್ಕ ಕೊಡಲಾಗಿದೆ. ಒಂದು ಬಾರಿ ತಾವು ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆದಾಗ ಟಂಡರ್ ಪ್ರಕ್ರಿಯೆಗೆ ಯಾರೂ ಸ್ಪಂದಿಸದೇ ಇದ್ದುದ್ದರಿಂದ ಅಂತಿಮವಾಗಿ ಸರ್ಕಾರ ಟರ್ನ್‌ಕೀ ಬೇಸಿಸ್ ಮೇಲೆ ಕೊಡುವುದಕ್ಕೆ ಯೋಚಿಸುತ್ತಿದೆ. ಜೊತೆಗೆ ಮಾನ್ಯ ಶಾಸಕರುಗಳು ಫಲಾನುಭವಿಗಳ ಪಟ್ಟಿಯನ್ನು ಬಹಳಷ್ಟು ತಡವಾಗಿ ಕೊಟ್ಟಿದ್ದರಿಂದ ವಿಳಂಬಗಿರುವುದಕ್ಕೆ ಇದೊಂದು ಕಾರಣ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಆದುದರಿಂದ, 09-10 ನೇ ಸಾಲಿಗೆ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆಂದು ತಮ್ಮ ಮೂಲಕ ಅವರಿಗೆ ಹೇಳಲಿಕ್ಕೆ ಬಯಸುತ್ತೇನೆ.